# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 819 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 09.03.2021 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಇರುವ ಮಾನದಂಡಗಳೇನು; ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು ಮತ್ತು ಈ ಅಂಗಡಿಗಳು ಯಾರ ಹೆಸರಿನಲ್ಲಿ ತೆರೆಯಲಾಗಿದೆ; (ತಾಲ್ಲೂಕುವಾರು ವಿವರಗಳನ್ನು ನೀಡುವುದು) | ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016 ರ ಕಲಂ 6 ಮತ್ತು ಇದಕ್ಕೆ ಅಳವಡಿಸಿದ ತಿದ್ದುಪಡಿ ಆದೇಶ ಸಂಖ್ಯೆ: ಎಫ್‌ಸಿಎಸ್ 17 ಆರ್‌ಪಿಆರ್ 2011(1), ದಿನಾಂಕ 21-05-2018 ಮತ್ತು ತಿದ್ದುಪಡಿ ಆದೇಶ ಸಂಖ್ಯೆ: ಎಫ್‌ಸಿಎಸ್ 100 ಆರ್ ಪಿಆರ್ 2019 (ಇ-ಆಫೀಸ್), ದಿನಾಂಕ 18-12-2020ರ ಆದೇಶಗಳಲ್ಲಿ ನ್ಯಾಯಬೆಲೆ ಅಂಗಡಿ ಮಂಜೂರಾತಿಗೆ ಕೆಳಕಂಡ ಆದ್ಯತೆಯನ್ನು ನಿಗಧಿಪಡಿಸಲಾಗಿದ್ದು ಅದರಂತೆ ನ್ಯಾಯಬೆಲೆ ಅಂಗಡಿ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.<br>ಎ) ಸರ್ಕಾರದ ನಿಗಮಗಳು/ಗ್ರಾಮ ಪಂಚಾಯಿತಿ/ಸ್ಥಳೀಯ ನಗರ ಸಂಸ್ಥೆಗಳು<br>ಬಿ) ಸಹಕಾರ ಸಂಘಗಳು.<br>1. ಟಿಎಪಿಸಿಎಂಎಸ್/ಕೋ-/ಆಫರೇಟಿವ್ ಮಾರ್ಕೆಂಟಿಂಗ್ ಸೊಸೈಟಿಗಳು.<br>2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ ವಿ.ಎಸ್.ಎಸ್.ಎನ್<br>3. ಹಾಫ್ ಕಾಮ್ಸ್<br>4. ಅಧಿಕೃತ ನೋಂದವಣಿಯಾದ ಸಹಕಾರ ಸಂಘಗಳು<br>5. ಅಧಿಕೃತ ನೋಂದಣಿಯಾದ ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು<br>6. ನೋಂದಣಿಯಾದ ಆದಿವಾಸಿ ವಿವಿದ್ದೋದ್ದೇಶ ಸಹಕಾರ ಸಂಘಗಳು.<br>7. ನೋಂದಣಿಯಾದ ನೇಕಾರರ ಸಹಕಾರ ಸಂಘಗಳು<br>8. ನೋಂದಣಿಯಾದ ಮಹಿಳಾ ವಿವಿದ್ದೋದ್ದೇಶ ಸಹಕಾರ ಸಂಘಗಳು<br>9. ನೋಂದಣಿಯಾದ ವಿವಿದ್ದೋದ್ದೇಶ ಸಹಕಾರ ಸಂಘಗಳು<br>10. ಅಂಗವಿಕಲ ಕಲ್ಯಾಣ ಸಹಕಾರ ಸಂಘಗಳು<br>11. ಸಹಕಾರ ಸಂಘಗಳು ನಡೆಸುವ ಬ್ಯಾಂಕ್ ಅಥವಾ ಕೋ-ಆಪರೇಟಿವ್ ಬ್ಯಾಂಕುಗಳು. |

| | | |
|---|---|---|
| | | 12. ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವ ಗ್ರಾಮ ಅಥವಾ ಸ್ಥಳ (locality) ದಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದಿಂದ ಗುರುತಿಸಲ್ಪಟ್ಟ ಸ್ತ್ರೀ ಶಕ್ತಿ ಗುಂಪು ಮತ್ತು ಮಹಿಳಾ ಸ್ವ ಸಹಾಯ ಗುಂಪುಗಳು. ಅರ್ಜಿ ಸಲ್ಲಿಸುವ ದಿನಾಂಕಕ್ಕೆ 3 ವರ್ಷಗಳಿಗೆ ಕಡಿಮೆ ಅಲ್ಲದ ಅವಧಿಗೆ ಅಸ್ತಿತ್ವದಲ್ಲಿದ್ದು, ಸಂಪೂರ್ಣ ಒಂದು ವರ್ಷದ ಅವಧಿಗೆ 1 ಲಕ್ಷ ರೂ.ಗಳ ಕನಿಷ್ಠ ಬ್ಯಾಂಕ್ ಬ್ಯಾಲೆನ್ಸ್ ಹೊಂದಿದ್ದು ಆಯುಕ್ತರಿಂದ ಆಗಿಂದಾಗ್ಗೆ ನೀಡಲಾಗುವ ಎಲ್ಲಾ ಹೆಚ್ಚುವರಿ ಷರತ್ತುಗಳನ್ನು ಪೂರೈಸಿರಬೇಕು<br>ಪರಂತುಕ: ಮಹಿಳಾ ಸ್ವಸಹಾಯ ಗುಂಪು ಮತ್ತು ಸ್ತ್ರೀ ಶಕ್ತಿ ಗುಂಪುಗಳ ಅರ್ಹತೆಯನ್ನು ಅಧಿಕೃತ ಪ್ರಾಧಿಕಾರಿಯು ಕಲಂ 11ರ ಉಪ ಕಲಂ (2) ರಲ್ಲಿ ವಿವರಿಸಿದ ವಿಶೇಷ ಪ್ರದೇಶಗಳಲ್ಲಿ ಸಡಿಲಗೊಳಿಸಬಹುದಾಗಿರುತ್ತದೆ.<br>13. ಖಾಸಗಿ-<br>ಎ) ವಿಕಲಚೇತನರ ವರ್ಗBench mark disability (ಪ್ರಾರಂಭಿಕವಾಗಿ 400 ನ್ಯಾಯಬೆಲೆ ಅಂಗಡಿಗಳು) ಮತ್ತು<br>ಬಿ) ಮಂಗಳಮುಖಿಯರ ವರ್ಗ (ಪ್ರಾರಂಭಿಕವಾಗಿ 30 ನ್ಯಾಯಬೆಲೆ ಅಂಗಡಿಗಳು)<br>ಸಿ) ಮೇಲ್ಕಂಡ ಸಹಕಾರ ಸಂಘಗಳ ಗುಣಮಟ್ಟವನ್ನು ಅವರಿಗೆ ನಿಡಲಾಗಿರುವ ಎ ಬಿ ಮತ್ತು ಸಿ ಶ್ರೇಣಿಯ ಆಡಿಟ್ ವರದಿಯನ್ನು ಪರಿಗಣಿಸಲಾಗುವುದು<br>ಡಿ) ಸದರಿ ಸಹಕಾರ ಸಂಘಗಳು 03 ವರ್ಷಗಳಿಗಿಂತ ಹಿಂದಿನವುಗಳಾಗಿರಬೇಕು ಹಾಗೂ ಕಳೆದ 2 ವರ್ಷಗಳಿಂದ ನಿರಂತರವಾಗಿ ರೂ.200000/-ದಷ್ಟು ಮೊತ್ತದ ಬ್ಯಾಂಕ್ ಬ್ಯಾಲೆನ್ಸ್ ಹೊಂದಿರಬೇಕು.<br>ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016ರ ಕಲಂ 5 ರಂತೆ ನ್ಯಾಯಬೆಲೆ ಅಂಗಡಿ ನಡೆಸಲು ಎರಡು ಮಾಹೆಗಳ ಪಡಿತರ ಪದಾರ್ಥಗಳನ್ನು ಶೇಖರಿಸುವಷ್ಟು ಸ್ಥಳಾವಕಾಶ ಉಳ್ಳ ಸೂಕ್ತವಾದ ವ್ಯಾಪಾರ ಸ್ಥಳವನ್ನು ಹೊಂದಿರಬೇಕು ಮತ್ತು ಎರಡು ಮಾಹೆಗಳ ಪಡಿತರ ದಾಸ್ತಾನನ್ನು ಖರೀದಿಸಲು ಸಾಕಷ್ಟು ಮೊತ್ತವನ್ನು ಬ್ಯಾಂಕ್ ಖಾತೆಯಲ್ಲಿ ಹೊಂದಿರಬೇಕು ಎಂಬ ಷರತ್ತನ್ನು ಸಹ ವಿಧಿಸಲಾಗಿದೆ.<br>ರಾಜ್ಯದಲ್ಲಿ ಹಾಲಿ **20,497** ನ್ಯಾಯಬೆಲೆ ಅಂಗಡಿಗಳಿದ್ದು ತಾಲ್ಲೂಕುವಾರು ವಿವರಗಳ ಮಾಹಿತಿಯನ್ನು ಸಿ.ಡಿ ಯ ಮುಖಾಂತರ ಒದಗಿಸಲಾಗಿದೆ. |

| | | |
|---|---|---|
| ಆ | ನ್ಯಾಯಬೆಲೆ ಅಂಗಡಿಯನ್ನು ಹೊಂದಿರುವವರು ಮರಣ ಹೊಂದಿದ್ದಲ್ಲಿ, ಅವರು ನಡೆಸುತ್ತಿರುವ ಅಂಗಡಿಯನ್ನು ಅವರ ವಾರಸುದಾರರಿಗೆ ನೀಡಲು ಅವಕಾಶವಿದೆಯೇ; (ಮಾಹಿತಿ ನೀಡುವುದು) | ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016ರ ಕಲಂ 13 ರನ್ವಯ ನ್ಯಾಯಬೆಲೆ ಅಂಗಡಿ ಮಾಲೀಕರು ಮರಣ ಹೊಂದಿದ್ದಲ್ಲಿ ಅವರ ವಾರಸುದಾರರಿಗೆ ನೀಡಲು ಅವಕಾಶವಿರುತ್ತದೆ.<br>ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016ರ ಕಲಂ 13 ರ ತಿದ್ದುಪಡಿ ಆದೇಶದಂತೆ. ವಿಧಿಸಿರುವ ಷರತ್ತುಗಳಂತೆ ಮೃತ ನ್ಯಾಯಬೆಲೆ ಅಂಗಡಿ ಮಾಲೀಕರ ವಯಸ್ಸು 65 ಮೀರಿರಬಾರದ.ಹಾಗೂ ಯಾವುದೇ ಆದಾಯದ ಮೂಲವಿಲ್ಲದ ಎಸ್.ಎಸ್.ಎಲ್.ಸಿ ಉತ್ತೀರ್ಣ ಹೊಂದಿರುವ ,65 ವರ್ಷಗಳ ವಯಸ್ಸು ಮೀರಿರದ ಪತಿ/ಪತ್ನಿ, 18 ವರ್ಷ ವಯಸ್ಸು ಮೇಲ್ಪಟ್ಟ ನಿರುದ್ಯೋಗಿ ಮಗ, ಅವಿವಾಹಿತ ಮಗಳು, ವಿದವ ಮಗಳು ನ್ಯಾಯಬೆಲೆ ಅಂಗಡಿ ಮಾಲೀಕರು ಮೃತ ಪಟ್ಟ 90 ದಿನಗಳೊಳಗಾಗಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಆಯುಕ್ತರು, ಆಹಾರ ನಾಗರೀಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರ ಪೂರ್ವಾನುಮತಿ ಪಡೆದು 10 ವರ್ಷಗಳ ಅವಧಿಗೆ ಪ್ರಾಧಿಕರಣವನ್ನು ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. |
| ಇ | ನ್ಯಾಯಬೆಲೆ ಅಂಗಡಿಯ ಮಾಲೀಕರು ಸರ್ಕಾರ ನಿಗದಿಪಡಿಸಿರುವ ಪ್ರಮಾಣದ ದಿನಸಿ ಸಾಮಾಗ್ರಿಗಳನ್ನು ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ದಾರರಿಗೆ ವಿತರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಯಾವ ಮಾನದಂಡಗಳನ್ನು ಅನುಸರಿಸುತ್ತಿದೆ; (ಮಾಹಿತಿ ನೀಡುವುದು) | ನ್ಯಾಯಬೆಲೆ ಅಂಗಡಿ ಮಾಲೀಕರು ಸರ್ಕಾರ ನಿಗಧಿಪಡಿಸಿರುವ ಪ್ರಮಾಣ ದಿನಸಿ ಸಾಮಾಗ್ರಿಗಳನ್ನು ಎಪಿಎಲ್ ಮತ್ತು ಬಿಪಿಎಲ್ ಪಡಿತರ ಚೀಟಿದಾರರಿಗೆ ವಿತರಿಸಲಾಗುತ್ತಿರುವ ಬಗ್ಗೆ ಖಚಿತ ಪಡಿಸಿಕೊಳ್ಳಲು ಈ ಕೆಳಗಿನ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲಾಗಿದೆ.<br>1.ರಾಜ್ಯದ ಎಲ್ಲಾ ಪಡಿತರ ಚೀಟಿಗಳು ಮತ್ತು ಫಲಾನುಭವಿಗಳನ್ನು ಅವರ ಆಧಾರ್ ನೊಂದಿಗೆ ಜೋಡಣೆ ಮಾಡಲಾಗಿರುತ್ತದೆ.<br>2. ಪ್ರತಿ ಮಾಹೆ ಪಡಿತರ ಪದಾರ್ಥಗಳನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸಲು ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.<br>3. ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಪಿ.ಓ.ಎಸ್ ವ್ಯವಸ್ಥೆ ಜಾರಿಗೊಳಿಸಿದ್ದು, ನೈಜ ಫಲಾನುಭವಿಗೆ ಬಯೋಮೆಟ್ರಿಕ್ ಮೂಲಕಪಾರದರ್ಶಕವಾಗಿ ಪಡಿತರ ವಿತರಣೆಯಾಗುವುದನ್ನು ಖಾತರಿಪಡಿಸಲಾಗುತ್ತದೆ.<br>4. ಪಡಿತರ ಪದಾರ್ಥಗಳನ್ನು ಸಗಟು ಮಳಿಗೆಗಳಲ್ಲಿ ದಾಸ್ತಾನಿರಿಸುವುದು ಹಾಗೂ ನ್ಯಾಯಬೆಲೆ ಅಂಗಡಿಗಳಿಗೆ ಬಿಲ್ಲಿಂಗ್ ಮಾಡುವ ವ್ಯವಸ್ಥೆಯನ್ನು ಕೂಡ ಸಂಪೂರ್ಣ ಗಣಕೀಕರಣಗೊಳಿಸಿ ಆನ್‌ಲೈನ್ ವ್ಯವಸ್ಥೆ ಜಾರಿಯಲ್ಲಿದೆ.<br>5. ಪಡಿತರ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಜಾರಿಗೆ ತರುವುದರೊಂದಿಗೆ ಫಲಾನುಭವಿಗಳ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಕೂಡ ಜಾರಿಗೆ ತರಲು ಆಹಾರ ಅಧಾಲತ್, ಜಾಗೃತ ಸಮಿತಿಗಳು, ಸಹಾಯವಾಣಿ, ಹಂಚಿಕೆ ಬಗ್ಗೆ ಪಡಿತರ ಚೀಟಿದಾರರಿಗೆ |

| | | |
|---|---|---|
| | | ಎಸ್.ಎಂ.ಎಸ್ ರವಾನೆ ಇತ್ಯಾದಿ ಕ್ರಮಗಳೂ ಕೂಡ ಜಾರಿಯಲ್ಲಿವೆ.<br>6. ನ್ಯಾಯಬೆಲೆ ಅಂಗಡಿಗಳಲ್ಲಿ ಪಿ.ಓ.ಎಸ್ ವ್ಯವಸ್ಥೆಯಲ್ಲಿ ಪಡಿತರ ಚೀಟಿದಾರರಿಗೆ ಆಧಾರ್ ಬಯೋಮೆಟ್ರಿಕ್ ಮುಖಾಂತರ ಪಡಿತರ ವಿತರಣೆ ಮಾಡಲಾಗುತ್ತಿರುವುದರಿಂದ ಅಂಗಡಿಯಲ್ಲಿ ಉಳಿಕೆಯಾಗುವ ಪದಾರ್ಥವನ್ನು ಲೆಕ್ಕಕ್ಕೆ ತೆಗೆದುಕೊಂಡು ಮುಂದಿನ ಮಾಹೆಯ ಹಂಚಿಕೆಯಲ್ಲಿ ಆರಂಭಿಕ ದಾಸ್ತಾನಾಗಿ ಕಡಿತಗೊಳಿಸಲಾಗುತ್ತದೆ. ಇದರಿಂದಾಗಿ ನ್ಯಾಯಬೆಲೆ ಅಂಗಡಿಯಲ್ಲಿ ಉಳಿಕೆಯಾಗುವ ಪದಾರ್ಥಗಳನ್ನು ದುರುಪಯೋಗವಾಗದಂತೆ ತಡೆಗಟ್ಟಿ ಎಲ್ಲವನ್ನೂ ಹಂಚಿಕೆಗೆ ಬಳಸಲು ಕ್ರಮ ಕೈಗೊಳ್ಳಲಾಗಿದೆ.<br>7. ರಾಜ್ಯದಲ್ಲಿ ಸಾರ್ವಜನಿಕ ವಿತರಣ ಪದ್ಧತಿಯ ಫಲಾನುಭವಿಗಳನ್ನು ಅವರವರ ಆಧಾರನೊಂದಿಗೆ ಸಂಪೂರ್ಣವಾಗಿ ಜೋಡಣೆ ಮಾಡಲಾಗಿದ್ದು, ಕೇಂದ್ರದ "ಒಂದು ರಾಷ್ಟ್ರ ಒಂದು ಪಡಿತರ" ಯೋಜನೆಯನ್ನು ಈಗಾಗಲೇ ಜಾರಿಗೆ ತರಲಾಗಿದೆ. ರಾಜ್ಯದಲ್ಲಿನ ಫಲಾನುಭವಿಗಳು ರಾಜ್ಯದ ಹಾಗೂ ಬೇರೆ ಯಾವುದೇ ರಾಜ್ಯದಲ್ಲಿ ಅವರ ಪ್ರತಿ ಮಾಹೆಯ ಪಡಿತರ ಹಂಚಿಕೆಯನ್ನು ಪಡೆದುಕೊಳ್ಳಲು ಈ ಯೋಜನೆಯಿಂದ ಅವಕಾಶ ಮಾಡಲಾಗಿದೆ. ಹಾಗೂ ರಾಜ್ಯದ ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯುವ ವ್ಯವಸ್ಥೆ ಜಾರಿಗೊಳಿಸಲಾಗಿದೆ. |
| ಈ | ಕಳೆದ 3 ವರ್ಷಗಳಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ಕಾರದ ನಿಗದಿಪಡಿಸಿರುವ ಪ್ರಮಾಣದ ದಿನಸಿ ಸಾಮಾಗ್ರಿಗಳನ್ನು ನೀಡದೆ ಅವ್ಯವಹಾರದಲ್ಲಿ ತೊಡಗಿರುವ ಪ್ರಕರಣಗಳು ಕಂಡುಬಂದಿವೆಯೇ; ಕಂಡುಬಂದಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಅಂಗಡಿ ಮಾಲೀಕರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ಪ್ರಕರಣವಾರು ಮಾಹಿತಿ ನೀಡುವುದು) | ಕಳೆದ 3 ವರ್ಷಗಳಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಅನ್ನಭಾಗ್ಯ ಯೋಜನೆಯಡಿ ಆಹಾರ ಧಾನ್ಯಗಳನ್ನು ವಿತರಿಸದೆ ಅವ್ಯವಹಾರದಲ್ಲಿ ತೊಡಗಿರುವ ಬಗ್ಗೆ ಒಟ್ಟು 352 ಪ್ರಕರಣಗಳನ್ನು ದಾಖಲಿಸಲಾಗಿದೆ. ಆರೋಪ ಸಾಬೀತಾಗಿರುವ 09 ನ್ಯಾಯಬೆಲೆ ಅಂಗಡಿಗಳನ್ನು ರದ್ದುಪಡಿಸಲಾಗಿದೆ. 202 ನ್ಯಾಯಬೆಲೆ ಅಂಗಡಿಗಳನ್ನು ಅಮಾನತ್ತು ಪಡಿಸಲಾಗಿದೆ. ಹಾಗೂ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಂಡಿರುವ/ದಂಡ ವಿಧಿಸಿರುವ ಪ್ರಕರಣಗಳ ಸಂಖ್ಯೆ 108. (ಪ್ರಕರಣವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ). |

ಆನಾಸ 11 ಆನಾಸ 2021 (ಇ-ಆಫೀಸ್)

(ಉಮೇಶ್ ವಿ. ಕತ್ತಿ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು